ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:17–11–2026 ರಂದು ಮಂಗಳವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 180ನೇ "ವಿದ್ಯಾವಿಷಯಕ ಪರಿಷತ್ ಆನ್‌ಲೈನ್ ವಿಶೇಷ ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

1.	ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು	ಅಧ್ಯಕ್ಷರು
2.	ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು	ಸದಸ್ಯ ಕಾರ್ಯದರ್ಶಿಗಳು
3.	ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ)	ಸದಸ್ಯರು
4.	ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು	ಸದಸ್ಯರು
5.	ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು	ಸದಸ್ಯರು
6.	ಶ್ರೀ ಉಲ್ಲಾಸ್ ಇ.ಜಿ, ಪ್ರಾಂಶುಪಾಲರು	ಸದಸ್ಯರು
7.	ಡಾ. ಚಿದಾನಂದ ಎನ್.ಕೆ, ಪ್ರಾಂಶುಪಾಲರು	ಸದಸ್ಯರು
8.	ಡಾ. ರಾಕೇಶ್ ಎಸ್.ಪಿ, ಪ್ರಾಂಶುಪಾಲರು	ಸದಸ್ಯರು
9.	ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು	ಸದಸ್ಯರು
10.	ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು	ಸದಸ್ಯರು
11.	ಡಾ. ಧನಂಜಯ, ಪ್ರಾಂಶುಪಾಲರು	ಸದಸ್ಯರು
12.	ಡಾ. ಎಂ.ಎಸ್. ಪ್ರಶಾಂತ್, ಪ್ರಾಂಶುಪಾಲರು	ಸದಸ್ಯರು
13.	ಪ್ರೊ. ಅಶೋಕ್ ಆರ್. ಲಮಾಣಿ. ಪ್ರಾಧ್ಯಾಪಕರು	ಸದಸ್ಯರು
14.	ಪ್ರೊ. ಜಿ.ಜೆ. ಸತೀಶ್. ಪ್ರಾಧ್ಯಾಪಕರು	ಸದಸ್ಯರು
15.	ಪ್ರೊ. ವರ್ಗೀಸ್ ಪಿ.ಎ. ಪ್ರಾಧ್ಯಾಪಕರು	ಸದಸ್ಯರು
16.	ಪ್ರೊ. ವೆಂಕಟೇಶ್ ಎಸ್. ಪ್ರಾಧ್ಯಾಪಕರು	ಸದಸ್ಯರು
17.	ಪ್ರೊ. ಯಾದವ್ ದಶರಥರಾವ್ ಬೋಡ್ಕೆ. ಪ್ರಾಧ್ಯಾಪಕರು	ಸದಸ್ಯರು
18.	ಪ್ರೊ. ಚಂದ್ರಶೇಖರ್ ಎಸ್, ಡೀನರು, ಕಲಾ ನಿಕಾಯ	ಸದಸ್ಯರು
19.	ಪ್ರೊ. ಗಜಾನನ ಪ್ರಭು ಬಿ, ಡೀನರು, ಶಿಕ್ಷಣ ನಿಕಾಯ	ಸದಸ್ಯರು
20.	ಪ್ರೊ. ಹೆಚ್.ಎನ್. ರಮೇಶ್, ಡೀನರು, ವಾಣಿಜ್ಯ ನಿಕಾಯ	ಸದಸ್ಯರು
21.	ಪ್ರೊ. ಎಸ್.ಕೆ. ನರಸಿಂಹಮೂರ್ತಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ	ಸದಸ್ಯರು
22.	ಡಾ. ಶ್ರೀಧರ್ ಎಸ್, ಗ್ರಂಥಪಾಲಕರು, (ಪ್ರಭಾರ)	ಸದಸ್ಯರು
23.	ಪ್ರೊ. ಯೋಗೇಂದ್ರ ಕೆ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ	ಸದಸ್ಯರು
24.	ಪ್ರೊ. ಯಾದವ್ ದಶರಥರಾವ್ ಬೋಡ್ಕೆ. ಕಾಲೇಜು ಅಭಿವೃದ್ಧಿ ಪರಿಷತ್	ಸದಸ್ಯರು
25.	ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ	ಸದಸ್ಯರು

ಗೈರುಹಾಜರಾದ ಸದಸ್ಯರು:

1.	ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್	ಸದಸ್ಯರು
2.	ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್	ಸದಸ್ಯರು
3.	ಶ್ರೀ ಶ್ರೀಕಾಂತ್ ಕೆ.ಎಸ್. ಹಣಕಾಸು ಅಧಿಕಾರಿಗಳು	ಸದಸ್ಯರು
4.	ಡಾ. ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು	ಸದಸ್ಯರು
5.	ಡಾ. ಕೆ.ಜಿ. ಚವ್ಹಾಣ, ಪ್ರಾಂಶುಪಾಲರು	ಸದಸ್ಯರು
6.	ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು	ಸದಸ್ಯರು
7.	ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.	ಸದಸ್ಯರು
8.	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.	ಸದಸ್ಯರು
9.	ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.	ಸದಸ್ಯರು
10.	ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.	ಸದಸ್ಯರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಪ್ರಸ್ತಾವನೆ:

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರನ್ನು ಮಾನ್ಯ ಕುಲಸಚಿವರು ಇಂದಿನ ಸಭೆಯ ಅಧ್ಯಕ್ಷತೆ ವಹಿಸಿರುವ ಮಾನ್ಯ ಕುಲಪತಿಗಳಿಗೆ, ಹಾಜರಿದ್ದ ಡೀನರುಗಳಿಗೆ, ಆನ್-ಲೈನ್ ಸಭೆಯಲ್ಲಿ ಪಾಲ್ಗೊಂಡಿರುವ ಎಲ್ಲಾ ಸದಸ್ಯರುಗಳಿಗೆ ಹಾಗೂ ಪ್ರಾಧಿಕಾರ ವಿಭಾಗದ ಅಧಿಕಾರಿ / ಸಿಬ್ಬಂದಿಗಳಿಗೂ ಆತ್ಮೀಯವಾಗಿ ಸ್ವಾಗತಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1)(vi) ರನ್ವಯ ಜೇಷ್ಠತೆಯನುಸಾರ ಪ್ರಾಂಶುಪಾಲರ ಕೋಟಾದಲ್ಲಿ ಮಾನ್ಯ ಕುಲಪತಿಯವರಿಂದ ವಿದ್ಯಾವಿಷಯಕ ಪರಿಷತ್‌ಗೆ ನಾಮನಿರ್ದೇಶನಗೊಂಡ ನೂತನ ಸದಸ್ಯರುಗಳಾದ ಡಾ. ಕೆ.ಜಿ. ಚವ್ಹಾಣ, ಪ್ರಾಂಶುಪಾಲರು, ಎಸ್.ಜೆ.ಎಂ. ಪ್ರಥಮ ದರ್ಜೆ ಕಾಲೇಜು, ತರೀಕೆರೆ ಹಾಗೂ ಡಾ. ಎಂ.ಎಸ್. ಪ್ರಶಾಂತ್, ಪ್ರಾಂಶುಪಾಲರು, ಶ್ರೀ ಪಾರ್ಶ್ವನಾಥ ಮಹಿಳಾ ಶಿಕ್ಷಣ ಕಾಲೇಜು, ಶಿವಮೊಗ್ಗ ಇವರುಗಳಿಗೆ ಸ್ವಾಗತ ಕೋರಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1)(iv) ರನ್ವಯ ವಿಧಾನಸಭೆಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ವಿಧಾನಸಭಾ ಸದಸ್ಯರುಗಳಾದ ಶ್ರೀ ಹೆಚ್.ಡಿ.ತಮ್ಮಯ್ಯ, ವಿಧಾನಸಭಾ ಸದಸ್ಯರು, ಚಿಕ್ಕಮಗಳೂರು ಹಾಗೂ ಶ್ರೀ ಬಿ.ಕೆ.ಸಂಗಮೇಶ್ವರ, ವಿಧಾನಸಭಾ ಸದಸ್ಯರು, ಭದ್ರಾವತಿ ಇವರುಗಳು ದಿನಾಂಕ:10-11-2023 ರಿಂದ ದಿನಾಂಕ:09-11-2026 ರವರೆಗೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿ ಬಿಡುಗಡೆಗೊಂಡಿರುವ ಇವರುಗಳಿಗೆ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1)(vi) ರನ್ವಯ ಜೇಷ್ಠತೆಯನುಸಾರ ಪ್ರಾಂಶುಪಾಲರ ಕೋಟಾದಲ್ಲಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿ, ದಿನಾಂಕ:31-10-2026 ರಂದು ವಿದ್ಯಾವಿಷಯಕ ಪರಿಷತ್ ಸದಸ್ಯತ್ವದಿಂದ ಬಿಡುಗಡೆ ಹೊಂದಿರುವ ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ ಇವರಿಗೂ ಸಹ ಅಭಿನಂದನೆಗಳನ್ನು ತಿಳಿಸಿದರು.

ಕುಲಸಚಿವರು ಮಾತನಾಡುತ್ತಾ, ಇಂದು ನಿಗದಿಪಡಿಸಿದ ಏಕ-ಕಾರ್ಯಸೂಚಿಯ ಈ ಆನ್-ಲೈನ್ ಸಭೆಯ ಉದ್ದೇಶವನ್ನು ವಿವರಿಸಿದರು. ನಂತರ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಾನ್ಯ ಕುಲಪತಿಗಳು ಮತ್ತೊಮ್ಮೆ ಎಲ್ಲಾ ಸದಸ್ಯರುಗಳಿಗೆ ಸ್ವಾಗತಿಸುತ್ತಾ, ವಿಶ್ವವಿದ್ಯಾಲಯವು ಈ ಏಕ-ಕಾರ್ಯಸೂಚಿಯ ಸಭೆಯನ್ನು ಕರೆದಿರುವ ಉದ್ದೇಶವನ್ನು ವಿವರಿಸುತ್ತಾ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಸಂಬಂಧಿಸಿದ ಪರಿನಿಯಮಾವಳಿಗಳಿಗೆ ಸರ್ಕಾರವು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದು, ಅದರಂತೆ ಪರಿನಿಯಮಾವಳಿ ಸ್ಥಾಯಿ ಸಮಿತಿಯು ಪರಿಶೀಲಿಸಿ ಸಿದ್ಧಪಡಿಸಿರುತ್ತದೆ. ಸರ್ಕಾರವು 24 ಅಧ್ಯಾಪಕ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಿರುವ ವಿಷಯವನ್ನು ಸಭೆಗೆ ತಿಳಿಸುತ್ತಾ, ಇದರ ಹಿನ್ನೆಲೆಯಲ್ಲಿ ಪರಿನಿಯಮಾವಳಿಗಳನ್ನು ಸರ್ಕಾರದಿಂದ ತುರ್ತಾಗಿ ಅನುಮೋದನೆ ಪಡೆದುಕೊಳ್ಳಬೇಕಾಗಿರುವುದರಿಂದ, ಪ್ರಾಧಿಕಾರಗಳ ಸಭೆಗಳ ಅನುಮೋದನೆ ಅವಶ್ಯಕತೆ ಇರುತ್ತದೆ. ಈ ಪರಿನಿಯಮಾವಳಿಗಳನ್ನು ದಿನಾಂಕ:13-10-2026 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದಿಸಿರುತ್ತದೆ. ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯ ಅವಶ್ಯಕತೆ ಇದ್ದುದರಿಂದ ಈ ಸಭೆಯನ್ನು ಆನ್‌ಲೈನ್‌ನಲ್ಲಿ ಕರೆಯಲಾಗಿದೆ ಎಂದರು. ಅದರಂತೆ ಹಣಕಾಸು ಸಮಿತಿ ಸಭೆಯ

R.SP 20/11/26
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಅನುಮೋದನೆಯನ್ನು ಕೂಡ ಪಡೆಯಲಾಗುವುದು ಎಂದರು. ಸದರಿ ಪರಿನಿಯಮಗಳನ್ನು ಸದಸ್ಯರುಗಳು ಪರಿಶೀಲಿಸಿ ವಿನಾದರೂ ತಿದ್ದುಪಡಿಗಳಿದ್ದಲ್ಲಿ ಸೂಚಿಸುವಂತೆ ತಿಳಿಸಿದರು.

ಪ್ರಾಧಿಕಾರಗಳ ವಿಭಾಗ

2026:ಎಸಿ: ಆನ್‌ಲೈನ್.01: ಸ್ನಾತಕೋತ್ತರ ವಿಭಾಗಗಳಿಗೆ ಸಂಬಂಧಿಸಿದ ಪರಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ ಆನ್‌ಲೈನ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

ಚರ್ಚೆ: ಸದಸ್ಯರಾದ ಪ್ರೊ.ಜಿ.ಜೆ.ಸತೀಶ್ ಇವರು ಮಾತನಾಡಿ ಪರಿನಿಯಮದ PREAMBLE ನ 2ನೇ ಪ್ಯಾರಾದಲ್ಲಿ ಸಹ್ಯಾದ್ರಿ ಕಾಲೇಜು ಆವರಣ ಎಂದು ಸೇರ್ಪಡೆಗೊಳಿಸುವುದು ಸೂಕ್ತವೆಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಈ ರೀತಿಯ ಸಣ್ಣ ಪುಟ್ಟ ವ್ಯಾಕರಣಾತ್ಮಕ ತಿದ್ದುಪಡಿಗಳನ್ನು ಸೇರಿಸುವುದರಿಂದ ಪರಿನಿಯಮದಲ್ಲಿ ಸರ್ಕಾರವು ಸೂಚಿಸಿದ ಬದಲಾವಣೆಗಳಿಗೆ ವಿರುದ್ಧವಾಗಬಾರದು ಎಂದು ತಿಳಿಸುತ್ತಾ, ಇದನ್ನು ಸೇರ್ಪಡೆಗೊಳಿಸಬಹುದೆಂದರು. ಕುಲಸಚಿವರು ಮಾತನಾಡಿ ಇನ್ನೇನಾದರೂ ಸಲಹೆ ಸೂಚನೆಗಳಿದ್ದಲ್ಲಿ ಸೂಚಿಸಬಹುದೆಂದು ಎಲ್ಲಾ ಸದಸ್ಯರುಗಳನ್ನು ಕೋರಿದರು. ಇಲ್ಲವಾದಲ್ಲಿ ಸೂಚಿತ ಅಲ್ಪ ಬದಲಾವಣೆಗಳೊಂದಿಗೆ ಅನುಮೋದಿಸಬಹುದೇ ಎಂದು ಕೋರಿದರು. ಇದಕ್ಕೆ ಎಲ್ಲಾ ಸದಸ್ಯರುಗಳು ಸಮ್ಮತಿ ಸೂಚಿಸಿದರು. ಮಾನ್ಯ ಕುಲಪತಿಯವರ ಆದೇಶದ ಮೇರೆಗೆ ಸಭೆಗೆ ಹಾಜರಾದ ಪರಿನಿಯಮ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಪ್ರೊ.ಬಿ.ವಿ. ರಾಮಪ್ರಸಾದ್‌ರವರು ಚರ್ಚೆಯಲ್ಲಿ ಪಾಲ್ಗೊಂಡು ಸದಸ್ಯರು ಸೂಚಿಸಿದ ಸಣ್ಣ–ಪುಟ್ಟ ಬದಲಾವಣೆಗಳನ್ನು ಸೇರ್ಪಡೆಗೊಳಿಸಲು ಸಮ್ಮತಿಸಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಮೇಲ್ಕಂಡ ಚರ್ಚೆಯಂತೆ ಪರಿನಿಯಮದ PREAMBLE ನ 2ನೇ ಪ್ಯಾರಾದ 5ನೇ ಸಾಲಿನ, the Postgraduate programs in various disciplines were started in Kuvempu University, Jnanasahyadri, Shankaraghatta, Shivamogga District ಆದ ನಂತರ and Sahyadri Science College, Shivamogga Kuvempu University ಎಂದು ಸೇರಿಸಿ ಉಳಿದಂತೆ ಸ್ನಾತಕೋತ್ತರ ವಿಭಾಗಗಳಿಗೆ ಸಂಬಂಧಿಸಿದ ಪರಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ನಿಯಮಾನುಸಾರ ಮುಂದಿನ ಕ್ರಮಕ್ಕೈಗೊಳ್ಳಲು ನಿರ್ಣಯಿಸಿತು.

2026:ಎಸಿ: ಆನ್‌ಲೈನ್.02: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ಯಾವುದು ಇರುವುದಿಲ್ಲ.

ಸಭೆಗೆ ಆಗಮಿಸಿದ ಹಾಗೂ ಆನ್‌ಲೈನ್‌ನಲ್ಲಿ ಭಾಗವಹಿಸಿ ಸೂಕ್ತ ಸಲಹೆ–ಸಹಕಾರ ನೀಡಿದ ಎಲ್ಲಾ ಸದಸ್ಯರುಗಳನ್ನು ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು 20/11/26

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಪಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner